**SC No. 149/2025**
**PW-4**
**CW-8**

ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

| |
|---|
| ಹೇಳಿಕೆ ಹಾಳೆ<br>(ಆರ್.ಪಿ.ಸಂಖ್ಯೆ: 57)<br>ನಮೂನೆ ಸಂಖ್ಯೆ: 4 |

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಎಸ್.ಸಿ ನಂ: **149/2025**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಶ್ರೀಮತಿ ಶಿವಲಿಲಾ ಹಿರೇಮಠ | ಪ್ರಾಸಾ: 4 |
| ಗಂಡನ ಹೆಸರು | : | ಶಿವಾನಂದ ಹಿರೇಮಠ | ಚಾಸಾ: 8 |
| ವಯಸ್ಸು | : | 60 ವರ್ಷ | ದಿನಾಂಕ : 12.08.2026 ರಂದು ಸಾಕ್ಷಿದಾರರಿಗೆ ಸತ್ಯಪ್ರತಿಜ್ಞೆಯನ್ನು ಬೋಧಿಸಲಾಯಿತು. |
| ಉದ್ಯೋಗ | : | ಕೇಸ ವರ್ಕರ ಮಕ್ಕಳ ಸಹಾಯವಾಣಿ, ಬೆಳಗಾವಿ | |
| ವಾಸಸ್ಥಳ | : | ಕಾಕತಿ, ಬೆಳಗಾವಿ | |

**ಮುಖ್ಯವಿಚಾರಣೆ: ಮಾನ್ಯ ಸರ್ಕಾರಿ ಅಭಿಯೋಜಕರಿಂದ:**

ನನಗೆ ಚಾಸಾ-7 ಗೊತ್ತು. ದಿ: 24.06.2022 ರಂದು ನಮ್ಮ ಮಕ್ಕಳ ಸಹಾಯವಾಣಿಯ ಸಂಯೋಜಕರರಾದಂತಹ ಮಲ್ಲೇಶ ರವರು ನನ್ನನ್ನು ಪ್ರವೀಣ ಮಡಿವಾಳರ ಮತ್ತು ಪವಿತ್ರಾ ಮಡಿವಾಳರ ಇವರ ರಕ್ತ ಮಾದರಿಗಳನ್ನು ಸಂಗ್ರಹಿಸುವ ಸಲುವಾಗಿ ನ್ಯಾಯಾಲಯಕ್ಕೆ ಹೋಗಬೇಕು ಎಂದು ತಿಳಿಸಿದರು. ಆ ಪ್ರಕಾರ ಸಂಜೆ 4-30 ಗಂಟೆಗೆ ಬೆಳಗಾವಿಯ ಸಿವಿಲ್ ನ್ಯಾಯಾಲಯಕ್ಕೆ ಬಂದಿದ್ದೇನು. ಆ ಕಾಲಕ್ಕೆ ನ್ಯಾಯಾಲಯದಲ್ಲಿ ನ್ಯಾಯಾಧೀಶರು, ವೈದ್ಯರು, ಮತ್ತು ಪೋಲಿಸರು ಇದ್ದರು. ಆ ಕಾಲಕ್ಕೆ

**SC No. 149/2025**
**PW-4**
**CW-8**

ಪೋಲಿಸರು ನ್ಯಾಯಾಲಯಕ್ಕೆ ಈ ಮೇಲೆ ಹೇಳಿದ ಪ್ರವೀಣ ಮಡಿವಾಳರ (4ನೇ ಆರೋಪಿ) ಮತ್ತು ಪವಿತ್ರಾ ಮಡಿವಾಳರ (5ನೇ ಆರೋಪಿ) ಇವರನ್ನು ಕರೆತಂದಿದ್ದರು. ನ್ಯಾಯಾಲಯದಲ್ಲಿ ವೈದ್ಯರು 4 ಮತ್ತು 5ನೇ ಆರೋಪಿತರ ರಕ್ತದ ಮಾದರಿಗಳನ್ನು ಒಂದು ಟ್ಯೂಬಿನಲ್ಲಿ ಸಂಗ್ರಹಿಸಿದರು. ಆ ಬಳಿಕ ಆ ಟ್ಯೂಬನ್ನು ಸೀಲು ಮಾಡಿ ಅದನ್ನು ಪ್ಯಾಕ್ ಮಾಡಿದ್ದರು. ಆ ಬಳಿಕ ಆ ಟ್ಯೂಬನ್ನು ವೈದ್ಯರು ತಮ್ಮ ವಶಕ್ಕೆ ಪಡೆದುಕೊಂಡರು. ಆ ಪ್ರಕ್ರೀಯೆ ನ್ಯಾಯಾಲಯದಲ್ಲಿ ಸಂಜೆ 4-30 ರಿಂದ 5-00 ಗಂಟೆಯ ವರೆಗೆ ನಡೆದಿತ್ತು. ಈ ಬಗ್ಗೆ ಪೋಲಿಸರು ಒಂದು ಪಂಚನಾಮೆಯನ್ನು ತಯಾರಿಸಿದ್ದರು. ಆ ಪಂಚನಾಮೆಯನ್ನು ನಿಪಿ-15 ಮತ್ತು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-15(ಎ) ಎಂದು ಗುರುತಿಸಲಾಗಿದೆ.

( ಈ ಸಂದರ್ಭದಲ್ಲಿ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಗೆ ಮಾನ್ಯ ಸರ್ಕಾರಿ ಅಭಿಯೋಜಕರು ಸಮಯ ಕೇಳುತ್ತಾರೆ, ಸಮಯ ನೀಡಲಾಯಿತು. )

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಇದೆ,

(ಮಂಜುನಾಥ ನಾಯಕ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಬೆಳಗಾವಿ.